ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1531/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮಲ್ಲಪ್ಪ** | | |
| **ತಂದೆಃಹೆಸರು** | **ದುರುಗಪ್ಪ** | **ಪಿಡಬ್ಲೂಃ** | **6** |
| **ವಯಸ್ಸು** | **49 ವರ್ಷ** | **ಸಿಡಬ್ಲೂಃ** | **6** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಹುಡಾಗ್ರಾಮ.** | | |

**ದಿನಾಂಕ 08-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ರವರ ಪರಿಚಯ ಇಲ್ಲ. ಆರೋಪಿತರು ಆಗಾಗ ಸ್ವಲ್ಪ ಪರಿಚಯ.

ಸಾಕ್ಷಿಗೆ ನಿಪಿ-2 ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.

ದಿ.02-12-21 ರಂದು ಮ. 3-10 ರಿಂದ 4-10 ರ ಸುಮಾರಿಗೆ ಚಾಸಾ-1 ರವರ ಹೊಲದಲ್ಲಿ ಮಾಡಿದ್ದೆ. ಅವರು ಏನೋ ಜಗಳ ಮಾಡಿಕೊಂಡಿದ್ದರು. ಪೋಲೀಸರು ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದಿದ್ದರು. ನನ್ನ ಸಮಕ್ಷಮ ಒಂದು ಚಪ್ಪಲಿ & ಕಟ್ಟಿಗೆಯನ್ನು ಜಪ್ತುಪಡಿಸಿಕೊಂಡಿದ್ದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು. ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-2

ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಅಷ್ಟೋಂದು ಮಾಹಿತಿ ಇಲ್ಲ. ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೆ, ಏಕೆಂದರೆ ನನಗೆ ಓದಲು ಬರೆಯಲು ಬರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ**

ಸದರಿ ನಿಪಿ 2 ನ್ನು ಸರ್ವೆ ನಂ.347*/1 ರಲ್ಲಿ ಮಾಡಿದ್ದರು ಎಂದರೆ ಸಾಕ್ಷಿಯು ಸರ್ವೆ ನಂಬರ್‌ನ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಪೋಲೀಸರು ಪಂಚನಾಮೆ ಮಾಡಲು ಬಂದಿದ್ದರು, ಅದನ್ನು ನಿಮಗೆ ಓದಿ ಹೇಳಿದ್ದರು, ನೀವು ಸಹಿ ಮಾಡಿದ್ದಿರಿ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಪೋಲೀಸರು ನಿಮಗೆ ನೋಟೀಸು ಕೊಟ್ಟಿಲ್ಲ ಎಂದರೆ ಸರಿ. ಘಟನಾ ಸ್ಥಳದ ಪಕ್ಕದಲ್ಲಿ ಹೊಲಗಳಿವೆ ಎಂದರೆ ಸಾಕ್ಷಿಯು ಸ್ವಲ್ಪ ಮುಂದೆ ಹೊಲ ಇದೆ. ನನ್ನ ಜಮೀನಿನ ಸರ್ವೆ ನಂಬರ್ ನನಗೆ ಈಗ ನೆನಪಿಲ್ಲ.

2. ಪಂಚನಾಮೆಯ ಕಾಲಕ್ಕೆ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ಚಾಸಾ-2, ಮೆಹಬೂಬ್ ಎನ್ನುವವರು ಇದ್ದರು. ಅವರನ್ನು ಬಿಟ್ಟು ಬೇರೆ ಯಾರು ಇದ್ದರು ಎಂದು ನನಗೆ ಮಾಹಿತಿ ಇಲ್ಲ. ಚಾಸಾ-2 ರವರು ಸ್ಥಳಕ್ಕೆ ಹೋದ ನಂತರ ನಾನು ಹೋಗಿದ್ದೆ.

3. ಚಾಸಾ-2 ರವರು ನನಗೆ ಅಷ್ಟೋಂದು ಪರಿಚಯ ಇಲ್ಲ. ಚಾಸಾ-2 ರವರು ನನ್ನನ್ನು ಸಹಿ ಮಾಡಲು ಕರೆದಿರಲಿಲ್ಲ, ಪೋಲೀಸರು ಕರೆದಿದ್ದರು. ಚಾಸಾ-2 ರವರು ನಿಮ್ಮನ್ನು ಕರೆದಿದ್ದರು, ನೀವು ಸಹಿ ಮಾಡಿದ್ದಿರಿ ಎಂದರೆ ಸರಿಯಲ್ಲ.

4. ಪಂಚನಾಮೆಯನ್ನು ಯಾವ ದಿಕ್ಕಿಗೆ ನಿಂತು ಮಾಡಿದ್ದರು ಎಂದರೆ ಸಾಕ್ಷಿಯು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸದರಿ ಹೊಲ ಚಾಸಾ-2 ರವರದ್ದಲ್ಲ, ಖಾದರ್ ಬಾಷಾ ರವರದ್ದು ಎಂದರೆ ಸಾಕ್ಷಿಯು ಅವರ ಅಣ್ಣತಮ್ಮಂದಿರದ್ದು, ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ಹೊಲದಲ್ಲಿ ಮು. ಮಾ. 1 ರಂತಹ ಕಟ್ಟಿಗೆಗಳು ಬಿದ್ದಿರುತ್ತವೆ ಎಂದರೆ ಸಾಕ್ಷಿಯು ಅದು ಸ್ಥಳದಲ್ಲಿತ್ತು, ಸಾಮಾನ್ಯವಾಗಿ ಹೊಲದಲ್ಲಿರುತ್ತವೆ ಎನ್ನುತ್ತಾರೆ. ಒಂದು ಕಾಲಿನ ಚಪ್ಪಲಿಗಳು ಸಾಮಾನ್ಯವಾಗಿ ಹೊಲದಲ್ಲಿ ಬಿದ್ದಿರುತ್ತವೆ ಎಂದರೆ ಸಾಕ್ಷಿಯು ಅದು ಜಾಗದಲ್ಲಿತ್ತು ಎನ್ನುತ್ತಾರೆ. ಆ ರೀತಿ ಹೊಲದಲ್ಲಿ ಬಿದ್ದಿದ್ದ ಕಟ್ಟಿಗೆ & ಚಪ್ಪಿಗಳನ್ನು ಚಾಸಾ-1 ರವರು ತೋರಿಸಿದ್ದು, ಅದರಂತೆ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

6.	ಘಟನಾ ಸ್ಥಳದ ಚೆಕ್ ಬಂದಿ ಹೇಳಲು ಬರುತ್ತದೆಯೇ, ಅದು ಅಕ್ಕಪಕ್ಕದ ಹೊಲಕ್ಕೆ ಸಂಬಂಧಿಸಿದ್ದು ಎನ್ನುತ್ತಾರೆ.

7.	ನೀವು ಹೇಳಿದಂತೆ ಯಾವುದೇ ಘಟನೆ ಆಗದೇ ಇದ್ದರೂ ಸಹ, ನೀವು ಯಾವುದೇ ಪಂಚನಾಮೆಗೆ ಹೋಗದೇ ಇದ್ದರೂ ಸಹ ಚಾಸಾ-2 ರವರು ಹೇಳಿದ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಏನೇನು ಬರೆದಿದೆ ಎಂದು ನಿಮಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ನಿಪಿ-2 ಕ್ಕೆ ಸಹಿಯನ್ನು ಯಾರು ಯಾರು ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಮಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ಪೋಲೀಸರು ಹೇಳಿದರೆಂದು ಸಹಿ ಮಾಡಿದ್ದಿರಿ, ನೀವು ಪಂಚನಾಮೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**